	ಜಿಲ್ಲೆ	೧೯೮೫-೮೬-	೧೯೮೬-೮೭	೧೯೮೭-೮೮
೧	ಬೆಂಗಳೂರು	೧೦	೧೯೨	೫
೨	ಕೋಲಾರ	೧೦	೭	೧೧೫
೩	ಕೆ ಜಿ ಎಫ್	—	—	೨
೪	ವೆಲ್ಲೂರು	೩	೩೭೭	—
೫	ಮಂಡ್ಯ	೧	೨೩	೨
೬	ಕೊಡಗು	೭೯	೧೬	೨
೭	ಹಾಸನ	೪	೨	೩
೮	ಬೆಳಗಾಂ	೩	—	೫
೯	ಧಾರವಾಡ	೧೨	೬	೬
೧೦	ವಿಜಾಪುರ	೨	೪೯	೪೫
೧೧	ರಾಯಚೂರು	೮	೧೪	೧೦
೧೨	ಗುಲ್ಬರ್ಗ	೨	೫	೫
೧೩	ಬೀದರ್	೧	೧	೧
೧೪	ಚಿತ್ರದುರ್ಗ	—	—	೩
೧೫	ಶಿವಮೊಗ್ಗ	೩	೭	೧೬
೧೬	ಬಳ್ಳಾರಿ	೩	೫	೨
೧೭	ದಕ್ಷಿಣ ಕನ್ನಡ	೬	೫೨	೭೦
೧೮	ಉತ್ತರ ಕನ್ನಡ	—	—	೨೦
೧೯	ಚಿಕ್ಕಮಗಳೂರು	೨	೨	೩
೨೦	ತುಮಕೂರು	೪	೩೦	—
೨೧	ಬೆಂಗಳೂರು ನಗರ	—	೧	೩೩
	ಒಟ್ಟು	೧೫೪	೭೯೧	೩೪೩

೨) ೧೯ದುವರೆಗೂ ೩ ಜನರಿಗೆ ಶಿಕ್ಷೆಯಾಗಿದೆ

೪) ಸಾಮಾನ್ಯವಾಗಿ ಈ ಕೆಳಗಿನ ಪ್ರತಿಬಂಧಕಾ ತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.—

೧) ಗುಪ್ತವಾರ್ತೆಗಳನ್ನು ಸಂಗ್ರಹಿಸುವುದು

೨) ಪ್ರತಿಬಂಧಕಾಜ್ಞೆಗಳನ್ನು ಜಾರಿಗೊಳಿಸುವುದು

೩) ಪ್ರತಿಬಂಧಕಾ ಬಂಧನಗಳು

೪) ಧಾರ್ಮಿಕ ಮೆರವಣಿಗೆಯ ಸಂದರ್ಭದಲ್ಲಿ ರಸ್ತೆ ಬಂದೋಬಸ್ತ್ ಏರ್ಪಡಿಸುವುದು.

ಅಧ್ಯಕ್ಷರು.—ಈಗ ಶ್ರೀಯುತರುಗಳಾದ ಪಂಪಾಪತಿ, ಕೆ.ಬಿ. ಶಾಣಪ್ಪ ಮತ್ತು ಆರ್. ಹೆಂಕಟರಾಮಯ್ಯನವರು ಈಗ ಗಮನ ಸೆಳೆಯಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೆ, ನಾಪು ತಮ್ಮ ಸೂಚನೆಯನ್ನು ಅನಂತರ ತೆಗೆದುಕೊಳ್ಳುತ್ತೇನೆ ದಯವಮಾಡಿ ಕುಳಿತುಕೊಳ್ಳಿ. ಈಗ ಮಲ್ಲಾರಿಗೌಡ ಎಸ್. ಪಾಟೀಲ್ ಎಸ್. ಪುಟ್ಟಸ್ವಾಮಿ, ಮತ್ತು ಎಂ. ಶಿವಣ್ಣ ಅವರು ಗಮನ ಸೆಳೆಯಬೇಕು.

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೆ, ನನ್ನ ಪ್ರಶ್ನೆಯ ಬಗ್ಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು.—ನಾನು ತಮ್ಮ ಹೆಸರು ಕರೆದಾಗ ತಾವು ಆಬ್ಸೆಂಟ್ ಇದ್ದಿರಿ.

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೆ, ನನ್ನ ಹೆಸರು ಕರೆಯಲಿಲ್ಲ.

ಅಧ್ಯಕ್ಷರು.—ಆಬ್ಸೆಂಟ್ ಆದವರಿಗೆ ಮತ್ತೆ ಕರೆಯಲಿಕ್ಕೆ ಬರುವುದಿಲ್ಲ. ಆಬ್ಸೆಂಟ್ ಇದ್ದವರಿಗೆ ಉತ್ತರ ಕಳುಹಿಸಿಕೊಡುತ್ತೇನೆ, ತಾವು ದಯಮಾಡಿ ಕುಳಿತುಕೊಳ್ಳಬೇಕು. ನಾನು ಎಲ್ಲರ ಹೆಸರನ್ನು ಕರೆದಿದ್ದೇನೆ, ಅಡ್ಡಂತಾಯ, ಎ. ಬಿ. ದೇವಾಯ್, ಜಯಕುಮಾರ್, ಪ್ರಭಾವ ಚಂದ್ರಶೆಟ್ಟಿ, ಎ. ಕೃಷ್ಣಪ್ಪ, ಆರ್. ರಾಮಯ್ಯ ಎಲ್ಲರ ಹೆಸರನ್ನೂ ಕರೆದಿದ್ದೇನೆ. ಆಗ ತಾವು ಆಬ್ಸೆಂಟ್ ಇದ್ದಿರಿ. ನಾನು ಉತ್ತರ ಕಳುಹಿಸಿಕೊಡುತ್ತೇನೆಂದು ಹೇಳಿದ್ದೇನೆ. ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೆ, ನನಗೆ ಅವಕಾಶ ಕೊಡಿ.

ಅಧ್ಯಕ್ಷರು.—ಇವೊತ್ತು ಅಲ್ಲ, ನಾಳೆ ನಾನು ತಮಗೆ ಉತ್ತರ ಕಳುಹಿಸಿಕೊಡುತ್ತೇನೆ, ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ರಾಮಯ್ಯ.—ನನಗೆ ಉತ್ತರ ಬಂದಿಲ್ಲ, ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಮ್ಮನ್ನು ಕರೆದಾಗ ತಾವು ಆಬ್ಸೆಂಟ್ ಇದ್ದಿರಿ, ಆಕಸ್ಮಾತ್ ಇದ್ದಿದ್ದರೂ ಸಹ ಮಂತ್ರಿಗಳು ಸಮಯ ಕೇಳಿದ್ದಾರೆ ಎಂದು ಹೇಳುತ್ತಾ ಇದ್ದೆ, ಈಗ ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಆರ್. ರಾಮಯ್ಯ.—ನನ್ನ ಎರಡು ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ ಅಂದರೆ ಹೇಗೆ?

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೈಮ್ ಕೇಳಿದ್ದಾರೆ ಎಂದು ಹೇಳಿದರೆ, ಇನ್ನು ಎರಡು ವಾರದವರೆಗೆ ಈ ಸರ್ಕಾರ ಇರುತ್ತದೆಯೇ?

(ಗೊಂದಲ)

ಅಧ್ಯಕ್ಷರು.—ಸರ್ಕಾರ ಹೋದರೆ ಅಸೆಂಬ್ಲಿ ಡಿಸಾಲ್ವ್ ಆಗುತ್ತದೆ. ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ಆಡಳಿತ ಪಕ್ಷದವರು ೫೦ ಜನರ ಬಹುಮತವನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ ಇದು ಮೈನಾರಿಟಿ ಗೌರ್ನ್‌ಮೆಂಟ್ ಆಗಿದೆ, ಅವರಿಗೇನಾದರೂ ಸ್ವಾಭಿಮಾನ ಇದ್ದರೆ ಇವೊತ್ತು ರಿಸೈನ್ ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ಸರ್ಕಾರ ಹೋದರೆ, ಎಲ್ಲರೂ ಹೋಗುತ್ತೀರಿ, ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಇವರು ಜನರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಮತ್ತು ಶಾಸಕರ ವಿಶ್ವಾಸವನ್ನು ಸಹ ಕಳೆದುಕೊಂಡಿದ್ದಾರೆ.....

ಶ್ರೀ ಆರ್. ವಿ. ದೇಶಪಾಂಡೆ.—ಹಾಗಾದರೆ, ತಾವು ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫೨ ಜನ ನಿಮ್ಮ್ ಕಡೆಯಿಂದ ಬಿಟ್ಟು ಹೋಗಿದ್ದಾರೆ ಅಂದಮೇಲೆ ನಾವು ನಿಮ್ಮ ಕುತ್ತಿಗೆಗೆ ಕೈ ಹಾಕಿ ದಬ್ಬಬೇಕು ಏನು?.....

(ಗೊಂದಲ)

ಅಧ್ಯಕ್ಷರು.—ಅವರು ಒಂದು, ನೀವು ಒಂದು ಹೇಳುವುದು ಬೇಡ. ಇವೊತ್ತು ಸರ್ಕಾರ ಡಿಸಾಲ್ವ್ ಆಗುತ್ತದೆ ಎಂದು ನೀವು ಹೇಳುವುದು ಬೇಡ, ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿ ಎಂದು ಅವರು ಹೇಳುವುದು ಬೇಡ. ನೀವೂ ಇರಿ, ಅವರೂ ಇರಲಿ, ಇನ್ನೂ ೨ ವರ್ಷ ಎಲ್ಲರೂ ಇರಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬಹುಮತ ಕಳೆದುಕೊಂಡಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಈಗ ತಾವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೆ, ಏನಿದು ಹುಡುಗಾಟಿಕೆ ?...

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ರೆಕಾರ್ಡೆಡ್. ಯಾರು ಏನು ಮಾತನಾಡಿದರೂ ಅದ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಥಿಂಗ್ ವಿಲ್ ಬಿ ರೆಕಾರ್ಡೆಡ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಅವರದು ಮೈನಾರಿಟಿ ಗೌರ್ನಮೆಂಟ್ ಇದೆ. ಅವರಿಗೆ ಅವರ ಪಕ್ಷದವರದ್ದೇ ಸಪೋರ್ಟ್ ಇಲ್ಲ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅವರು ಸೋತಿದ್ದರೂ ಗೆದ್ದಿದ್ದೇವೆ ಎಂದು ಹೇಳಿಕೊಳ್ಳುವುದು ಎಂಥಾದ್ದು ?

ಅಧ್ಯಕ್ಷರು.—ಮಾನ್ಯ ರಾಮಯ್ಯನವರೇ, ನಾನು ತಮ್ಮನ್ನು ಕರೆದಾಗ ತಾವು ಆಬ್ಸೆಂಟ್ ಇದ್ದಿರಿ. ಆದರೂ ಕೂಡಾ ನಾನು ತಮಗೆ ಉತ್ತರವನ್ನು ತರಿಸಿಕೊಡುತ್ತೇನೆಂದರು ಹೇಳಿದ್ದೇನೆ.....

ಶ್ರೀ ಆರ್. ರಾಮಯ್ಯ.—ನಾನು ಕೇಳಿದ ಪ್ರಶ್ನೆಗೆ ಉತ್ತರವೇ ಇಲ್ಲದಿದ್ದರೆ ಏನು ಪ್ರಯೋಜನ?

(ಗೊಂದಲ)

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ನಮ್ಮ ಮಾನ್ಯ ಉಪ ನಾಯಕರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದು ಬಹಳ ಗಹನ ವಾದ ವಿಷಯ. ಮಾನ್ಯ ಮುಖ್ಯ ಮಂತ್ರಿಗಳು ಇದುವರೆಗೂ ಸಭೆಯಲ್ಲಿದ್ದರು. ಇವತ್ತು ಅವರು ಇಲ್ಲ. ದಯವಿಟ್ಟು ಅವರನ್ನು ಸಭೆಗೆ ಕರೆಸಬೇಕು. ಅವರು ರಾಜೀನಾಮೆಯನ್ನು ಕೊಡಬೇಕೆಂದು ನಮ್ಮ ಒತ್ತಾಯವೇನೂ ಇಲ್ಲ. ಆದರೆ ಸಂಸದೀಯ ವ್ಯವಹಾರದ ದೃಷ್ಟಿಯಿಂದ ನಾವು ಹೇಳಿ ತ್ತಿದ್ದೇವೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಬಹುಮತ ಇಲ್ಲ ಎನ್ನತಕ್ಕದ್ದು.....

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಾದರೆ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬನ್ನಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೆ, ನಾನು ಹೇಳುವುದನ್ನು ಕೇಳಿ. ಮಾನ್ಯ ಮಾದೇಗೌಡರೇ ನಾನು ಹೇಳುವುದನ್ನು ಕೇಳಿ. ಪಾಯಿಂಟ್ ಆಫ್ ಆರ್ಡರ್ ಏನಾದರೂ ಇದ್ದರೆ ಹೇಳಲಿ ಎಂದು ನಿಮಗೆ ಅವಕಾಶ ಕೊಟ್ಟೆ. ಏಕೆಂದರೆ ನೀವು ಹಿರಿಯರು, ಯಜಮಾನರು, ಏನಾದರೂ ಬುದ್ಧಿವಾದ ವನ್ನು ಹೇಳುತ್ತೀರೆಂದು ನಾನು ನಿಮಗೆ ಅವಕಾಶ ಕೊಟ್ಟೆ. ಆದರೆ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನೂ ಇಲ್ಲ. ನಾನು ಶಿವಣ್ಣನವರನ್ನು ಕರೆದಿದ್ದೇನೆ. ಆದ್ದರಿಂದ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆಯೇ ಇಲ್ಲ ಇಲ್ಲಿ ಒಳ್ಳೆಯ ರೀತಿಯಿಂದ ಸದನ ನಡೆಸುವುದಕ್ಕೆ ಅನುಕೂಲವಾ ವಾತನ್ನು ಏನಾದರೂ ಹೇಳುವುದಿದ್ದರೆ ಹೇಳಿ...

ಶ್ರೀ ಜಿ ಮಾದೇಗೌಡ.—ಮಾನ್ಯ ಲಕ್ಷ್ಮೀಸಾಗರ್‌ರವರೇ ಬೇಕಾದರೂ ಮಂತ್ರಿ ಮಂಡಲ ಗಳಾಗಲಿ, ಆದಕ್ಕೆ ನಮ್ಮವೇನೂ ಅಭ್ಯಂತರವಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದೆಲ್ಲಾ ಪ್ರಯೋಜನವಾಗುವುದಿಲ್ಲ. ಇದರಲ್ಲಿ ಏನು ಪಾಯಿಂಟ್ ಆಫ್ ಆರ್ಡರ್ ಇಲ್ಲ.

(ಗೊಂದಲ)

ಅವರಿಗೇನಾದರೂ ಧೈರ್ಯವಿದ್ದಲ್ಲಿ ನೋಕಾನ್‌ಫಿಡೆನ್ಸ್ ಮೋಷನ್ ತರಲಿ.

ಅಧ್ಯಕ್ಷರು.—ಇಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ನಾನು ಗಮನ ಸೆಳೆಯುವ ಸೂಚನೆಯ ಬಗ್ಗೆ ಕರೆದಿದ್ದೇನೆ. ಆದ್ದರಿಂದ ಈ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಮಾನ್ಯ ಮಾದೇಗೌಡರು ಹಿರಿಯ ಸದಸ್ಯರು ಇದ್ದಾರೆ. ಅವರನ್ನು ನಾನು ಕರೆದಿದ್ದೇನೆ. ಅವರೇನಾದರೂ ಬುದ್ಧಿವಾದವನ್ನು ಹೇಳುವುದಾದರೆ ಹೇಳಲಿ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಅವರಿಗೆ ಧೈರ್ಯವಿದ್ದರೆ ನೋ ಕಾನ್‌ಫಿಡೆನ್ಸ್ ಮೋಷನ್ ತರಲಿ. ಈ ಸದನದಮುಂದೆ ಯಾವ ಪ್ರಶ್ನೆಯೂ ಇಲ್ಲ. ನಿಮಗೆ ಬರವಣಿಗೆಯಲ್ಲಿ ಬಂದಿಲ್ಲ. ತಾವು ಯಾವ ನಿಯಮಾವಳಿಯ ಕೆಳಗೆ ಪರವಾನಗಿಯನ್ನು ಕೊಟ್ಟಿದ್ದೀರಿ ಎಂಬುದನ್ನು ತಾವು ತಿಳಿಸಬೇಕು ಯಾವ ನಿಯಮಾವಳಿಯ ಕೆಳಗೆ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಅವರಿಗೆ ನೀವು ಅವಕಾಶವನ್ನು ಕೊಟ್ಟಿದ್ದೀರಿ ? ಮತ್ತು ಅವರು ಯಾವ ನಿಯಮಾವಳಿ ಕೆಳಗೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ?

(ಗೊಂದಲ)

ಅಧ್ಯಕ್ಷರು.—ಮಾದೇಗೌಡರೇ, ತಾವು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ನನಗೆ ಅವಕಾಶ ಕೊಡಿ.

ಅಧ್ಯಕ್ಷರು.—ಈಗ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆಯೇ ಬರುವುದಿಲ್ಲ. ಕ್ವಶ್ಚನ್ ಹವರ್ ಮುಗಿದ ಮೇಲೆ ನಾನು ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳಲು ಕರೆದಿದ್ದೇನೆ.

(ಗೊಂದಲ)

ಮಾನ್ಯ ರಾಮಯ್ಯನವರೇ, ನಿಮ್ಮ ಪ್ರಶ್ನೆಯನ್ನು ಕರೆದಾಗ ನೀವು ಇರಲಿಲ್ಲ. ನೀವು ಹಾಜರಿಲ್ಲ ದಿದ್ದರೂ ಕೂಡ ನಿಮಗೆ ಮತ್ತೆ ಕರೆದು ಅವಕಾಶವನ್ನು ಕೊಟ್ಟಿದ್ದೇನೆ. ಅದು ಮುಗಿದಮೇಲೆ ಈಗ ಮಾನ್ಯ ಶಿವಣ್ಣನವರಿಗೆ ಗಮನ ಸೆಳೆಯುವ ಸೂಚನೆದು ಬ ಪ್ರಸ್ತಾಪ ಮಾಡಲು ಹೇಳಿದ್ದೇನೆ. ಅವರದು ಆದಮೇಲೆ ಪಾಯಿಂಟ್ ಆಫ್ ಆರ್ಡರ್ ಎತ್ತಲಿಕ್ಕೆ ಅವಕಾಶ ಇರುತ್ತದೆ. I will not allow anybody e ther this side or that side.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಮಾನ್ಯ ಲಕ್ಷ್ಮೀಸಾಗರ್‌ರವರು ಇಂಟರಪ್ಟ್ ಮಾಡಿದ್ದು ದು.

ಅಧ್ಯಕ್ಷರು.—ದಯವಿಟ್ಟು ಬರುವುದಿಲ್ಲ, ನಿಮ್ಮದು ಬರುವುದಿಲ್ಲ. ತಾವು ಕುಳಿತುಕೊಳ್ಳಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಾಯಿಂಟ್ ಆಫ್ ಆರ್ಡರ್ ಮೇಲೆ ನಿಮ್ಮ ಸಲಹೆ ಏನಾದರೂ ಇದ್ದರೆ ಹೇಳಿ ಎಂದು ಅವರಿಗೆ ತಾವೆ ಹೇಳಿದಿರಿ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ, ಅವರಿಗೆ ಮಾತನಾಡಲು ಮಧ್ಯಾಹ್ನದ ಮೇಲೆ ಬೇಕಾದರೆ ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಶಿವಣ್ಣನವರನ್ನು ಗಮನ ಸೆಳೆಯುವ ಸೂಚನೆಯ ಬಗ್ಗೆ ಕರೆದಿದ್ದೇನೆ. ದಯವಿಟ್ಟು ಕೇಳಿ, ಗಮನ ಸೆಳೆಯುವ ಸೂಚನೆ ಬಹಳ ಮಹತ್ವದು ಇರುತ್ತದೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಏನು ಹೇಳುತ್ತೇನೆ ಎಂಬುದನ್ನು ದಯವಿಟ್ಟು ಕೇಳಿ. ನಾನು ಬಾಯನ್ನೇ ಬಿಡಲು ಅವಕಾಶವನ್ನು ತಾವು ಕೊಡಲಿಲ್ಲ.

ಅಧ್ಯಕ್ಷರು.—ಈಗ ಮಾನ್ಯ ರಾಮಯ್ಯನವರು, ಮಾನ್ಯ ಮಾದೇಗೌಡರು, ಮಾನ್ಯ ನೀಲಕಂಠಪ್ಪನವರು ಯಾರು ಏನೇ ಮಾತನಾಡಿದರೂ ಅದು ಅಧಿಕೃತ ದಾಖಲೆಗೆ ಹೋಗುವುದಿಲ್ಲ. ಈಗ ಎಂ. ಶಿವಣ್ಣನವರನ್ನು ಗಮನ ಸೆಳೆಯಲು ಕರೆದಿರುತ್ತೇನೆ, ಅವರು ಮಾನ್ಯ ಸಚಿವರ ಗಮನವನ್ನು ಸೆಳೆಯಲಿ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೆ.....

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಮಾದೇಗೌಡರೇ, ನೀವು ಏನು ಹೇಳಿದರೂ ರೆಕಾರ್ಡ್ ಆಗುವುದಿಲ್ಲ. ನೀವು ಹಿರಿಯ ಸದಸ್ಯರಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ. ನೀಲಕಂಠಪ್ಪನವರು ಹೊಸಬರಿದ್ದಾರೆ, ಎದ್ದೆದ್ದು ನಿಲ್ಲುತ್ತಾರೆ. ಈಗ ಗಮನ ಸೆಳೆಯುವ ಸೂಚನೆ ಮುಗಿಯುವವರೆಗೆ ಅವಕಾಶ ಕೊಡುವುದಿಲ್ಲ. ಮಧ್ಯಾಹ್ನ ಬೇಕಾದರೆ ನಿಮಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಪಾಯಿಂಟ್ ಆಫ್ ಆರ್ಡರ್ ಮೇಲೆ ಯಾವ ವಿಷಯಕ್ಕೂ ಅವಕಾಶ ಇಲ್ಲ. ಯಾರು ಏನೇ ಹೇಳಿದರೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಂ. ರಘುಪತಿ.—ರೂಲ್ಸ್ ಪ್ರಕಾರ ನಿರ್ಣಯ ತರಲಿ, ಚರ್ಚೆ ಮಾಡೋಣ. Let them place before you in writing, let them give in writing and it should be in the for according to rules.

INTERRUPTION

ಅಧ್ಯಕ್ಷರು.—ಯಾರು ಏನು ಹೇಳಿದರೂ ರೆಕಾರ್ಡ್ ಆಗುವುದಿಲ್ಲವೆಂದು ನಾನು ಹೇಳಿದ್ದೇನೆ ನೀವು ಜನರ ಸಲುವಾಗಿ ಮಾತನಾಡುವುದಕ್ಕೆ ಬಂದಿದ್ದೀರಾ ಅಥವಾ ಏನು ? ಈಗ ಎಂ. ಶಿವಣ್ಣನವರು ಗಮನ ಸೆಳೆಯುವ ಸೂಚನೆಯ ಬಗ್ಗೆ ಕೇಳಲಿ ಅವರು ಕೇಳಲಿಲ್ಲ ಎಂದರೆ ರೂಲ್ಸನ್ನು ಓದಿ ಹೇಳಬೇಕಾಗುತ್ತದೆ, ನೀತಿ ನಿಯಮ ಬಿಟ್ಟು ಯಾರು ಮಾತನಾಡುತ್ತಾರೆ ಅವರಿಗೆ ಕೂರಿ ಎಂದು ಹೇಳುವ ಅಧಿಕಾರ ನನಗೆ ಇದೆ. ನೀತಿ ನಿಯಮಗಳನ್ನು ಉಲ್ಲಂಘನೆ ಮಾಡಿದರೆ ಅಂಥವರನ್ನು ಹೊರಗೆ ಕಳುಹಿಸುವ ಅಧಿಕಾರವೂ ನನಗೆ ಇದೆ. ಆದ್ದರಿಂದ ಈಗ ಯಾರಿಗೂ ಅವಕಾಶ ಕೊಡುವುದಿಲ್ಲ. ಯಾರು ಏನೇ ಹೇಳಿದರೂ ರೆಕಾರ್ಡ್ ಆಗುವುದಿಲ್ಲ. ದಯವಿಟ್ಟು ತಾವು ಕುಳಿತು ಕೊಳ್ಳಿ ನೀವು ಯಜಮಾನರು ಹಿರಿಯ ಸದಸ್ಯರು ಸಂಸ್ಥೆಗೆ ಏನು ಬೇಕಾದರೂ ಮಾತನಾಡುವುದು ಸರಿಯಲ್ಲ. ನಾನು ಈಗ ಶಿವಣ್ಣನವರನ್ನು ಕರೆದಿದ್ದೇನೆ, ಅವರ ಗಮನ ಸೆಳೆಯುವ ಸೂಚನೆಯನ್ನು ಈಗ ತೆಗೆದು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ.....

(ಗೊಂದಲ)

ಅಧ್ಯಕ್ಷರು.—ಏನೂ ರೆಕಾರ್ಡ್ ಆಗುವುದಿಲ್ಲ, ಯಾರಿಗೂ ಅವಕಾಶ ಕೊಡುವುದಿಲ್ಲ. ಈಗಾಗಲೆ ರೂಲಿಂಗ್ ಕೊಟ್ಟಿದ್ದೇನೆ. ಗಮನ ಸೆಳೆಯುವ ಸೂಚನೆಯ ಬಗ್ಗೆ ಕೇಳಲು ಕರೆದಿದ್ದೇನೆ. ಅದು

*Not recorded as ordered by the chair.

ಪ್ರಾರಂಭವಾಗಲಿ. ಈಗ ಬೇರೆ ಯಾರೂ ಏನೂ ಮಾತನಾಡತಕ್ಕದ್ದೂ ಸರಿಯಲ್ಲ ಈ ಹಂತದಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲವೆಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಸಂವ್ಯಾನೆ ಈ ಕಡೆ, ಆ ಕಡೆ ಗಲಾಟೆ ಮಾಡುತ್ತೀರಿ. ನಾನು ಏನಾದರೂ ಸಲಹೆ ಕೊಡುತ್ತಾರೆಂದು ಹೇಳಿದೆ. ಸಲಹೆ ಕೊಡುವುದು ಬಿಟ್ಟು ಪಾಯಿಂಟ್ ಆಫ್ ಆರ್ಡರ್ ಎಂದು ಗಲಾಟೆ ಮಾಡುವುದಕ್ಕೆ ಶುರು ಮಾಡಿದಿರಿ. ನೀವು ಅವರಿಗೆ, ಬೇಕಾದ ಸಲಹೆ ಹೇಳುತ್ತೀರಾ? ಹೇಳಿ, ಇಲ್ಲದಿದ್ದರೆ ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ನಿವಂಗಾಗಲಿ ಮಾನ್ಯ ಲಕ್ಷ್ಮೀಸಾಗರ್‌ರವರಿಗಾಗಲಿ, ರಘುಪತಿಯವರಿಗಾಗಲಿ ಏತಕ್ಕೆ ಭಯ? ಎರಡು ಮಾತು ಹೇಳಿದರೆ ಸರ್ಕಾರವೇನು ಬಿದ್ದು ಹೋಗುವುದಿಲ್ಲ. ಪರಿಸ್ಥಿತಿ ಏನು ಇದೆಯೆಂದರೆ.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ಅಂಥ ಪ್ರಶ್ನೆ ಏನೂ ಬಂದಿಲ್ಲ. ಸದನ ಚೆನ್ನಾಗಿ ನಡೆಯುತ್ತಿದೆ. ಕಾಲಿಂಗ್ ಅಟೆನ್‌ಷನ್ ಬಗ್ಗೆ ಮಾನ್ಯ ಸದಸ್ಯರನ್ನು ಕರೆದಿದ್ದೇನೆ. ಶಿವಣ್ಣನವರು ಕಾಲಿಂಗ್ ಅಟೆನ್‌ಷನ್ ಬಗ್ಗೆ ಈಗ ಕೇಳಲಿ.

೧೧-೩೦ ಎ. ಎಂ.

ಶ್ರೀ ಜಿ. ಮಾದೇಗೌಡ.—ಇವತ್ತಿನ ಪರಿಸ್ಥಿತಿ ಏನಿದೆ.....

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಎರಡೂ ಕಡೆಯವರು ಶಾಂತಿಯಿಂದ ಇದ್ದಾರೆ.

ಶ್ರೀ ಜಿ. ಮಾದೇಗೌಡ.—ನಾನು ಎರಡು ಮಾತಿನಲ್ಲಿ ಮುಗಿಸುತ್ತಿದ್ದೆ. ಇಷ್ಟುಹೊತ್ತಿಗೆ ಮುಗಿಸುತ್ತಿದ್ದೆ. ಆದರೆ ನೀವು ಏತಕ್ಕೆ ಹಠ ಮಾಡುತ್ತೀರೋ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಏನು ಹೇಳಿ ನೋಡೋಣ. ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಬೇಡ. ಸಲಹೆ ಇದ್ದರೆ ಹೇಳಿ.

ಶ್ರೀ ಜಿ. ಮಾದೇಗೌಡ.—ಸ್ವಾಮಿ, ಈಗ ತಮಗೂ ಗೊತ್ತಿದೆ. ನೀವೂ ಅದನ್ನು ಒಪ್ಪುತ್ತೀರಿ.

ಅಧ್ಯಕ್ಷರು.—ಏನಂ ಹೇಳುತ್ತೀರಿ ನೀವು?

ಶ್ರೀ ಜಿ. ಮಾದೇಗೌಡ.—ಅಲ್ಲ ಸ್ವಾಮಿ. ನಾನಂ ಬಾಯಿ ಬಿಡುವುದಕ್ಕಿಂತ ಮುಂಚಿತವಾಗಿ ಊಹೆ ಮಾಡಿಕೊಳ್ಳುವ ಸರ್ವಜ್ಞರೇ ನೀವು?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಜಿ. ಮಾದೇಗೌಡ.—ನಾನು ಏನು ಹೇಳುತ್ತೇನೆ ಎಂಬುದನ್ನು ಸಮಾಧಾನದಿಂದ ಕೇಳಿ. ಅವರ ಕಡೆಯವರೂ ಕೇಳಲಿ. ನಾನು ಏನಂ ಹೇಳುತ್ತೇನೆಯೇ ಅದು ನಡೆದುಹೋಗುವುದಿಲ್ಲ.

ಅಧ್ಯಕ್ಷರು.—ನೀವೂ ಹೇಳುವುದು ಬೇಡ. ಅವರೂ ಹೇಳುವುದು ಬೇಡ. ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಲು ಕರೆದಿದ್ದೇನೆ.

ಶ್ರೀ ಜಿ. ಮಾದೇಗೌಡ.—ಹಾಗಾದರೆ ಅಸೆಂಬ್ಲಿ ಅಡ್ಜರ್ನ್ ಮಾಡಿ. ಯಾರೂ ಹೇಳುವುದು ಬೇಡ ಅಂದರೆ ಎಲ್ಲರಿಗೂ ಬಾಯಿ ಕಟ್ಟಿ ಕೂರಿಸಿ.

SPEAKER.—Nothing will be recorded.

x x x

ಶಿವಣ್ಣನವರೇ ನೀವು ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಗ್ಗೆ ಕೇಳಿರಿ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೆ xxx

---

x x x Not recorded as ordered by the chair.

ಅಧ್ಯಕ್ಷರು.—ನೀವು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಕೂಡ್ರಿ ಸ್ವಾಮಿ. ಯಾವಾಗಲೂ ಹೀಗೆ ತೊಂದರೆ ಕೊಡುತ್ತೀರಲ್ಲ, ನೀವು ಯಜಮಾನರು.

MR. SPEAKER.—Nothing will be recorded. ಮಾನ್ಯ ಶಿವಣ್ಣನವರೇ ಕೇಳಿ, ತಮ್ಮದು ಕಾಲಿಂಗ್ ಅಟೆನ್‌ಷನ್ ಇದೆ. I have got highest regard for you. You are a seniormost member. I will not allow you to say anything. ನೀವು ದಯವಿಟ್ಟು ಕುಳಿತುಕೊಳ್ಳಿ.

(ಮಾದೇಗೌಡರು ಮಾತನಾಡುತ್ತಿದ್ದರು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ರೈಸ್ ಮಾಡಲು...

MR. SPEAKER.—Nothing will be recorded. ಸದನ ನಡೆಯಬೇಕು ಅನುತ್ತೀರೋ ಅಥವಾ ಇದೇ ತರಹ ಸದನದ ಸಮಯವನ್ನು ಹಾಳು ಮಾಡಬೇಕು ಅನ್ನುತ್ತೀರೋ ?

ಅಧ್ಯಕ್ಷರು.—ರೆಕಾರ್ಡ್ ಆಗುವುದಿಲ್ಲ. ಏತಕ್ಕೆ ಹೇಳುತ್ತೀರಿ ? ನೀವು ಏನೇ ಹೇಳಿದರೂ ರೆಕಾರ್ಡ್ ಆಗುವುದಿಲ್ಲ, ಶಿವಣ್ಣನವರೇ ತಾವು.

ಶ್ರೀ ಎಸ್. ಶಿವಣ್ಣ.—ಅವರು ನಿಂತಿದ್ದಾಗ ನಾನು ಹೇಗೆ ಕೇಳಲಿ ? ಅವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ xxx

ಅಧ್ಯಕ್ಷರು.—ನಾನು ಪರ್ಮಿಷನ್ ಕೊಟ್ಟಿಲ್ಲ. ಅದು ರೆಕಾರ್ಡ್ ಆಗುವುದಿಲ್ಲ. ಪರ್ಮಿಷನ ಕೊಟ್ಟಾಗ ತಾವು ಆಡ್ದಾದಿಡ್ಡಿ ಮಾತನಾಡಂವುದಕ್ಕೆ ಹತ್ತಿದಿರಿ.

ಶ್ರೀ ಆರ್, ಎನ್. ನಾಯಕ್.—ನೀವು ಅವರಿಗೆ ಅಲೋ ಮಾಡಿದ್ದೀರಿ, ಪಾಯಿಂಟ್ ಆಫ್ ಆರ್ಡರ್ ಬಗ್ಗೆ.....

ಅಧ್ಯಕ್ಷರು.—ಯಾವ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ. I have ruled it out. ಈಗ ಎಂ. ಶಿವಣ್ಣನವರ ಕಾಲಿಂಗ್ ಅಟೆನ್‌ಷನ್.

ಶ್ರೀ ಜಿ. ಮಾದೇಗೌಡ.—ಸಾರ್.....xxx

ಅಧ್ಯಕ್ಷರು.—ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ, ಪಾಯಿಂಟ್ ಆಫ್ ಆರ್ಡರ್ ಏನೂ ಇಲ್ಲ. ಪ್ರಾರಂಭದಲ್ಲೇ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ ನೀವು ಹಾಗೆ ಹೇಳುವುದಕ್ಕಾಗುವುದಿಲ್ಲ. ತಾವೂ ರೂಲ್ಸ್ ಪ್ರಕಾರ ಕೆಲಸ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಅದನ್ನು ನೀವು ಕೇಳುವ ಅವಶ್ಯಕತೆ ಇಲ್ಲ. ಅವರು ಪಾಯಿಂಟ್ ಆಫ್ ಆರ್ಡರ್ ಏನು ಹೇಳುತ್ತಿದ್ದರು ಅದರಲ್ಲಿ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ. I have ruled it out.

ಶ್ರೀ ಜಿ. ಮಾದೇಗೌಡ.—ಯಾವ ರೂಲ್ ಕೆಳಗಡೆ ರೂಲ್‌ಔಟ್ ಮಾಡಿದ್ದೀರಿ ?

ಶ್ರೀ ಬಿ. ಸ್ವಾಮಿರಾವ್.—ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ ಎಂದರೆ ಏನು ? ನಮಗೆ ನ್ಯಾಯ ಬೇಕು.

(ಗೊಂದಲ)

ಶ್ರೀ ಜಿ. ಮಾದೇಗೌಡ.—ನಿಯಮಗಳು ನನಗೆ ಗೊತ್ತಿದೆ.

---

xxx Not recorded as ordered by the Chair.

ಅಧ್ಯಕ್ಷರು.—ನೀವು ಹೇಳಿದ್ದು ಯಾವುದೂ ರೆಕಾರ್ಡ್ ಆಗುವುದಿಲ್ಲ,

(ಗೊಂದಲ)

ನಾನು ಮೊದಲೇ ಹೇಳಿದ್ದೇನೆ. ಸ್ವಲ್ಪ ನೀವು ಕೇಳಿ. ನಿಮ್ಮ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಪಾಯಿಂಟೂ ಇಲ್ಲ. ಆರ್ಡರೂ ಇಲ್ಲ. ನಾನು ಅದನ್ನು ರೂಲ್ ಔಟ್ ಮಾಡಿದ್ದೇನೆ. ಪಂತ್ರು ಗಮನ ಸೆಳೆಯುವ ಸೂಚನೆ ಬಗ್ಗೆ ಎಂ. ಶಿವಣ್ಣನವರ ಹೆಸರನ್ನು ಕರೆದಿದ್ದೇನೆ. ಆದರೂ ಕೂಡಾ The Speaker may, direct any member whose conduct is in his opinion grossly, disorderly to withdraw immediately from the House, and any member so ordered to withdraw shall do so forthwith and shall absent himself during the remainder of the day's sittings. ಈ ಹಂತಕ್ಕೆ ನಾವು ಹೋಗುವುದು ಬೇಡ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಎಲ್ಲಿ ಡಿಸ್ ಆರ್ಡರ್‌ಲಿ ಇದೆ ?

ಅಧ್ಯಕ್ಷರು.—ನಾನು ಎಂ. ಶಿವಣ್ಣನವರ ಗಮನ ಸೆಳೆಯುವ ಸೂಚನೆ ಬಗ್ಗೆ ಹೆಸರು ಕರೆದಿದ್ದೇನೆ. ಅವರು ಸಂಬಂಧಪಟ್ಟ ಮಂತ್ರಿಗಳ ಗಮನ ಸೆಳೆಯಲ್ಲಿ. (ಗೊಂದಲ) ಮಾತನಾಡುವುದಕ್ಕೆ ನಾನು ನಿಮಗೂ ಅವಕಾಶ ಕೊಡುವುದಿಲ್ಲ. ಅವರಿಗೂ ಅವಕಾಶ ಕೊಡುವುದಿಲ್ಲ. ನಾನು ನಿಮ್ಮ ಪಾಯಿಂಟ್ ಆಫ್ ಆರ್ಡರನ್ನು ರೂಲ್‌ಔಟ್ ಮಾಡಿದ್ದೇನೆ.

(ಗೊಂದಲ)

ಶ್ರೀ ಜಿ. ಮಾದೇಗೌಡ.—ಮಾನ್ಯ ಅಧ್ಯಕ್ಷರೇ.....

MR. SPEAKER.—Whatever you say it will not be rseorded·

ಶ್ರೀ ಜಿ. ಮಾದೇಗೌಡ.— ಪ್ರಪಂಚದ ಇತಿಹಾಸದಲ್ಲೇ ನಾನು ಇಂತಹ ಅಧ್ಯಕ್ಷರನ್ನು ನೋಡಿಲ್ಲ. ಯಾವ ವಿಚಾರದಲ್ಲಿ ನಾನು ಮಾತನಾಡುತ್ತಿದ್ದೇನೆಂಬುದನ್ನು ಕೇಳಲೇ ಇಲ್ಲ. ಇದನ್ನು ಕೇಳದೇ ನನ್ನ ಪಾಯಿಂಟ್ ಆಫ್ ಆರ್ಡರನ್ನು ರೂಲ್‌ಔಟ್ ಮಾಡಿದ್ದೇನೆಂದರೆ ಇಲ್ಲಿ ಕುಳಿತುಕೊಂಡು ನಾವು ಕೆಲಸ ಮಾಡುವುದಾದರೂ ಹೇಗೆ ?

ಅಧ್ಯಕ್ಷರು.—ಯಾರಿಗೂ ಮಾತನಾಡಲು ಅವಕಾಶ ಇಲ್ಲ. ಇವರಿಗೂ ಅವಕಾಶ ಇಲ್ಲ. ಅವರಿಗೂ ಅವಕಾಶ ಇಲ್ಲ. ಈಗ ಎಂ. ಶಿವಣ್ಣನವರಿಗೆ ಮಾತ್ರ ಅವಕಾಶ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಮಾದೇಗೌಡರು ಈ ಸಭೆಯ ಸದಸ್ಯರು ಅಲ್ಲವೇ ? ಅವರು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ ? ಅವರು ಏನು ಹೇಳುತ್ತಾರೆಂಬುದನ್ನು ದಯಮಾಡಿ ಕೇಳಿ. ಆಮೇಲೆ ರೂಲ್‌ಔಟಾದರೂ ಮಾಡಿ, ಎಕ್ಸ್‌ಪಂಜ್ ಆದರೂ ಮಾಡಿ. ಮೊದಲು ಅವರು ಹೇಳುವುದನ್ನು ಕೇಳಿ.

ಅಧ್ಯಕ್ಷರು.—ಅವರು ಹೇಳಿದ್ದರಲ್ಲಿ ಪಾಯಿಂಟೂ ಇಲ್ಲ. ಆರ್ಡರೂ ಇಲ್ಲ. ನಾನು ರೂಲ್ ಔಟ್ ಮಾಡಿದ್ದೇನೆ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪಾಯಿಂಟೇ ಇಲ್ಲ ಎಂದರೆ ಹೇಗೆ ? ತಾವು ಏನಾದರೂ ಇಮ್ಯಾಜಿನ್ ಮಾಡುತ್ತೀರಾ ? ತಾವು ಏನಾದರೂ ಇಮ್ಯಾಜಿನರಿ ವರ್ಲ್ಡ್‌ನಲ್ಲಿದ್ದೀರಾ ? ಅವರು ಏನು ಹೇಳುತ್ತಾರೆಂಬುದೇ ಇವ್ಯೂ ನವಂಗೆ ಗೊತ್ತಿಲ್ಲ. ಈ ಮನೆಯ ಸದಸ್ಯರಾದ ಮೇಲೆ ಅವರು ಮಾತನಾಡುವುದಕ್ಕೆ ಹಕ್ಕು ಇದೆ. ಅವರ ಮನಸ್ಸಿನಲ್ಲಿ ಏನು ಇದೆ ಎಂಬುದು ನಿಮಗೆ ಗೊತ್ತೇ ? ಸದಸ್ಯರಾದ ಮೇಲೆ ಇಲ್ಲಿ ಮಾತನಾಡಲು ಅವರಿಗೆ ಹಕ್ಕು ಇರುತ್ತದೆ. ಅವರು ತಮ್ಮ ಮೇಲೆ ಅಸ್ಪರ್ಷನ್ಸ್ ಮಾಡಬೇಕೆಂಬುದೇನೂ ಇಲ್ಲ. ಲಾಸ್ ರಿಸಾರ್ಟ್‌ನಲ್ಲಿ ನೀವು ಇಟ್ ವಿಲ್ ನಾಟ್ ಬಿ

ರೆಕಾರ್ಡ್ ಎಂದು ಹೇಳಿದರೆ ಅದಕ್ಕೆ ಅರ್ಥ ಇದೆ. ಉಸಿರು ಬಿಡುವುದಕ್ಕಿಂತಲೂ ಮುಂಚೆ ರೆಕಾರ್ಡ್ ಮಾಡಲಾಗುವುದಿಲ್ಲ ಎಂದು [illegible] ಇದ್ದಾಗ [illegible] ಮುಂಚೆ ನೋಭಾನ್ಸ್ ಎನ್ನುತ್ತೀರಿ. ಲಕ್ಷ್ಮೀಸಾಗರ್‌ರವರು [illegible] ನಿನ್ನೆಯೆಲ್ಲಾ ನಾನು ಇದನ್ನು ವಾಚ್ ಮಾಡಿದ್ದೇನೆ ನಾನು ನಿನ್ನೆಯೆಲ್ಲಾ ಬಾಯಿ ತೆಗೆದಿಲ್ಲ.

ಶ್ರೀ ಲಕ್ಷ್ಮೀಸಾಗರ್.—ತಾವು ಈಗ ಬಂದಿದ್ದೀರಿ.

ಅಧ್ಯಕ್ಷರು.—ತಾವು ಮೊದಲಿನಿಂದಾ ಇದ್ದಿದ್ದರೆ ಈ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಈಗ ತಾವು ಬಂದಿದ್ದೀರಿ. [illegible] ಕಾಲಿಂಗ್ ಅಟೆನ್‌ಷನ್ ಬಗ್ಗೆ ಪ್ರಸ್ತಾಪ ಮಾಡಿಲಂ ಕೆರದು. ಮೊದಲು ಗಮನ ಸೆಳೆವ ಸೂಚನೆಗೆ ಮುಖ್ಯ ಮಂತ್ರಿಗಳು ಇಲ್ಲದ್ದನ್ನು ನೋಡಿ ಆಮೇಲೆ ಅವಕಾಶ ಮಾಡಿಕೊಡುವುದಾಗಿ ಪರ್ಮಾಡು ಮಾಡಿದೆ. ಆ ನಂತರ ಎರಡನೇ ಗಮನ ಸೆಳೆಯುವ ಸೂಚನೆ ಕರಿಯುವಷ್ಟರಲ್ಲಿ ರಾಮಯ್ಯನವರು ತಮ್ಮ ಪ್ರಶ್ನೆ ಬಗ್ಗೆ ಕೇಳಿದರು. ಅವರ ಹೆಸರನ್ನು ನಾನು ಕರೆದಾಗ ಅವರಾ ಇಬ್ಬರಿಗೆ ಇದ್ದ ಪ್ರಶ್ನೆಗೆ ಮಂತ್ರಿಯವರೇ ಕಾಲಾವಕಾಶ ಕೇಳಿದ್ದರಿಂದ ಮತ್ತೊಮ್ಮೆ ಈ ಪ್ರಶ್ನೆಗೆ ಅವಕಾಶ ಕೊಡಿಸುವುದಾಗಿ ಮಾನ್ಯ ಸದಸ್ಯರಿಗೆ ಹೇಳಿದೆ. ಈ ಟೈಮಿನಲ್ಲಿ ಈ ಕಡೆಯವರೂ ಆ ಕಡೆಯವರೂ ಮಾತನಾಡುತ್ತಾ ಹೋದರು. ಆಗ ಇಬ್ಬರೂ ಮಾತನಾಡುವುದು ರೆಕಾರ್ಡ್ ಆಗುವುದಿಲ್ಲವೆಂದು ಹೇಳಿದೆ. ಆನಂತರ ಇವರ ಮೇಲೆ ಅವರು ಅವಿಶ್ವಾಸ ತರಲಿ ಎಂದು ಹೇಳಿದ್ದರು. ಆ ನಂತರ ಮೂರು ಮುಂದಿ ಬಂದಿದ್ದಾರೆ, ಇನ್ನೂ ೩೦ ಜನ ಬರುತ್ತಾರೆಂದು ಅವರು ಹೇಳಿದರು. ಈ ಹೊತ್ತಿನಲ್ಲಿ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ನಂತರ ಅವರು ಪಾಯಿಂಟನ್ನು ಬಿಟ್ಟು ಬೇರೆ ಮಾತನಾಡುವುದಕ್ಕೆ ಹೋದರು.

ಗೊಂದಲ

ಅಧ್ಯಕ್ಷರು.—ವಿಷಯ ಇನ್ನೂ ಚರ್ಚೆಗೆ ಬಂದಿಲ್ಲ. ಆದ್ದರಿಂದ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ....

(ಕಲವು ಕಾಂಗ್ರೆಸ್ (ಐ) ಸದಸ್ಯರಿಂದ ಪ್ರತಿಭಟನೆ)

ಶ್ರೀ ಆರ್. ಎನ್. ನಾಯ್ಕ್.—ನಿನ್ನೆ ನಾವು ಪ್ರತಿಭಟನೆ ಮಾಡಿದ್ದೆವು. ಪಾಯಿಂಟ್ ಇಲ್ಲ, ಆರ್ಡರ್ ಇಲ್ಲ ಎಂದು ಹೇಳುತ್ತಾ ಇದ್ದರಲ್ಲಾ, ಏನು ಹೇಳಿದ್ದೀರಿ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ಈಗ ಶ್ರೀ [illegible] ಅವರಿಗೆ ಗಮನ ಸೆಳೆಯುವ ಸೂಚನೆಯಲ್ಲಿ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಕೊಡಿಸಿದ್ದೇನೆ.

ಶ್ರೀ ಜಿ. ಮಾದೇಗೌಡ.—ಈ [illegible]

MR. SPEAKER.—I have ruled your point of order. ನಿಮ್ಮ ಪಾಯಿಂಟ್ ಆಫ್ ಆರ್ಡರ್‌ನಲ್ಲಿ [illegible]

(ಗೊಂದಲ)

ಈ ಥರ ಮಾಡ್ತೀನಿ ಅಂತ ಈ ರೀತಿಯಾಗಿ ಒಂದು ಕೆಟ್ಟ ಸಂಪ್ರದಾಯವನ್ನು ಈ ಸದನದಲ್ಲಿ ನಿರ್ಮಾಣ ಮಾಡತಕ್ಕದ್ದು ಸೂಕ್ತ ಅಲ್ಲ.

MR. SPEAKER.—Protest against the ruling of the Speaker is also contempt of the Speaker and the contempt of the House.

ಶ್ರೀ ಆರ್. ಎನ್. ನಾಯ್ಕ್.—ಸ್ಪೀಕರ್ ಅವರು ಏನೂ ಹೇಳಿಲ್ಲ. ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶವನ್ನೇ ಮಾಡಿಕೊಟ್ಟಿಲ್ಲ. [illegible] ಎನು ಇದ್ದರೂ ನಿಂತುಕೊಂಡು ಮಾತುಗಳನ್ನು ಆಡಬೇಕು ಎಂದು ಶ್ರೀ ಲಕ್ಷ್ಮೀಸಾಗರ್ ಅವರು ಸೂಚನೆ ಮಾಡಿದ್ದಾರೆ. ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳುವುದಕ್ಕೆ ತಾವು [illegible]

MR. SPEAKER.—I have ruled out the point of order, in the best interest of the conduct of the House. I have ruled out the point of order.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವುದಂ ಪಾಯಿಂಟ್ ಆಫ್ ಆರ್ಡರ್ ?

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರೆ ವಿಷಯ ಬಂದೇ ಬರುತ್ತದೆ. ಈಗ ಇಲ್ಲಿ ಅದಕ್ಕೆ ಅವಕಾಶ ಬರುವುದಿಲ್ಲ. ಈಗ ಮೊದಲು ಶ್ರೀ ಶಿವಣ್ಣನವರ ಗಮನ ಸೆಳೆಯುವ ಸೂಚನೆ ಪ್ರಸ್ತಾಪ ಆಗಲಿ, ನಂತರ ಪಾಯಿಂಟ್ ಆಫ್ ಆರ್ಡರ್ ಇದ್ದರೆ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಂ ಇನ್ನೂ ವಿಷಯವನ್ನು ರೈಸ್ ಮಾಡಿಲ್ಲ. ಅಷ್ಟರೊಳಗೆ ನೀವು ರೂಲಿಂಗ್ ಕೊಡುವುದೆಂದರೆ ಏನು ?

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ಹೇಳಿದರು. ಆಗ ಲಕ್ಷ್ಮೀಸಾಗರ್ ಅವರು ಇದರಲ್ಲಿ ಪಾಯಿಂಟ್ ಇಲ್ಲ, ಆರ್ಡರ್ ಬರುವುದಿಲ್ಲ ಎಂದು ಹೇಳಿದರಂ.....

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಅದನ್ನು ನೀವು ಹೇಳಬೇಕೆ ಹೊರತು ಶ್ರೀ ಲಕ್ಷ್ಮೀಸಾಗರ್ ಅವರು ಹೇಳಿದರು, ಅದನ್ನು ನಾನು ಕೇಳುತ್ತೇನೆ ಎಂದು ತಾವು ಹೇಳಬಾರದಂ.

ಶ್ರೀ ಗೋಪಾಲ ಬಮುಕಂದ ಕಾನಡೆ.—ಅಧ್ಯಕ್ಷರೇ. ನೀವು ಹೇಳಿದು ದಂ ಯಾವ ಪುಸ್ತಕದಲ್ಲೂ ಇಲ್ಲ.

(ಗೊಂದಲ)

MR. SPEAKER.—Nothing will be recorded. xxx

MR. SPEAKER.—Members cannot protest against the Speaker's ruling and also it is the contempt of the House and the Speaker. Ruling given by the Chair cannot be discussed in the House not can any.....'' ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲವೆಂದು ನಾನು ರೂಲಿಂಗ್ ಕೊಟ್ಟಿದ್ದೇನೆ. ಈ ಸದನ ನಡೆಯುವುದಕ್ಕೆ ನೀವು ಯಾರೂ ದಯವಿಟ್ಟು ಅಡೆತಡೆ ಮಾಡುವುದಂ ಬೇಡ.

ಶ್ರೀ ಜಿ. ಮಾದೇಗೌಡ.—ಇಂತಹ ಒಂದು ಕೆಟ್ಟ ಸಂಪ್ರದಾಯವನ್ನು.....

ಅಧ್ಯಕ್ಷರು —ನಿಮ್ಮದು ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ ಎಂದು ನಾನು ರೂಲಿಂಗ್ ಕೊಟ್ಟಿದ್ದೇನೆ. ಕುಳಿತುಕೊಳ್ಳಿ. ನಿಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ಜಿ. ಮಾದೇಗೌಡ.—ನೀವು ಇಂಥ ಕೆಟ್ಟ ಸಂಪ್ರದಾಯವನ್ನು ಸದನದಲ್ಲಿ ಹಾಕಬೇಡಿ ಎಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

MR. SPEAKER.—I have ruled it out. Nothing will be recorded. ನಿಮಗೆ ಅವಕಾಶ ಕೊಡುವುದಿಲ್ಲ. I have given a ruling. ನೀವು ಏನೇ ಹೇಳಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. xxx

(ಮಾನ್ಯ ಅಧ್ಯಕ್ಷರ ಸೂಚನೆಯಂತೆ ದಾಖಲು ಮಾಡಿಕೊಂಡಿಲ್ಲ)

(ಗೊಂದಲ)

ಅಧ್ಯಕ್ಷರು.—ಈಗ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. xxx

(ಗೊಂದಲ)

---

xxx Not recorded as ordered by the Chair

MR. SPEAKER.—I have given a ruling. Nothing will be recorded xx

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನೀವು ಮಾತನಾಡುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. I have ruled out your point of order..

(ಗೊಂದಲ)

ಶ್ರೀ ಜಿ. ಮಾದೇಗೌಡ.—ನಮಗೆ ಅಧಿಕಾರ ಇದೆ, ತಾವು ಹೇಳಿ.

(ಗೊಂದಲ)

ಅಧ್ಯಕ್ಷರು.—ಈಗ ಅವಕಾಶ ಕೊಡುವುದಿಲ್ಲ, ಇಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ತಾವು ಕೂಡಿ, ಈಗ ಎಂ. ಶಿವಣ್ಣನವರನ್ನು ಕರೆದಿದ್ದೇನೆ. ಅವರು ಗವರ್ನರ ಸೆಳೆಯುವ ಸೂಚನೆ ಬಗ್ಗೆ ಕೇಳಲಿ.

(ಗೊಂದಲ)

MR. SPEAKER.—I have ruled it out. Nothing will be recorded and whatever you say will not be recorded. I will not hear you. I have already given my ruling. xx

ಅಧ್ಯಕ್ಷರು.—ಇಲ್ಲಿ ಯಾವುದಾದರೂ ವಿಷಯ ಇದ್ದರೆ. ಪಾಯಿಂಟ್ ಇಫ್ ಆರ್ಡರ್‌ಗೆ ಅವಕಾಶ ಕೊಡಬಹುದಿತ್ತು. ಇಲ್ಲಿ ಸಬ್ಜಕ್ಟೇ ಇಲ್ಲ.

(ಗೊಂದಲ)

SRI C. P. MUDALAGIRIYAPPA.—We have got every right to assist the Chair.....

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಈಗ ಮೊದಲನೇ ಕಾಲಿಂಗ್ ಅಟೆನ್‌ಷನ್ ಕರೆಯಿರಿ ..

ಅಧ್ಯಕ್ಷರು.— ಈಗ ಚೀಫ್ ಮಿನಿಸ್ಟರು ಬಂದಿದ್ದಾರೆ, ಮೊದಲನೇ ಕಾಲಿಂಗ್ ಅಟೆನ್‌ಷನ್ ಬಗೆ ವೆಂಕಟರಾಮಯ್ಯನವರೇ ತಾವು ಕೇಳಿ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ತಾವು ಈಗಾಗಲೇ ಎಂ. ಶಿವಣ್ಣನವರನು ಕರೆದಿದ್ದೀರಿ. ಅವರು ಇನ್ನೂ ತಮ್ಮ ಪ್ರಶ್ನೆಯನ್ನು ಕೇಳಿಯೇ ಇಲ್ಲ. ಈಗ ಮತ್ತೆ ವೆಂಕಟರಾಮಯ್ಯನವರನ್ನು ಕರೆಯುತ್ತಿರುವುದು ಸರಿಯಲ್ಲ.

ಅಧ್ಯಕ್ಷರು.—ಆಗ ಚೀಫ್ ಮಿನಿಸ್ಟರು ಇರಲಿಲ್ಲ, ಆದ್ದರಿಂದ ಎಂ. ಶಿವಣ್ಣನವರನು ಕರೆದು, ಅವರ ಪ್ರಶ್ನೆಗೆ ಉತ್ತರ ಕೊಡಲಿ ಎಂದು ಕರೆದೆ. ಮೊದಲನೆಯ ಕಾಲಿಂಗ್ ಅಟೆನ್‌ಷನ್ ಅನಂತರ ತೆಗೆದುಕೊಳ್ಳೋಣ ಎಂದು ಇದ್ದೆ. ಈಗ ಚೀಫ್ ಮಿನಿಸ್ಟರ್ ಬಂದಿದ್ದಾರೆ, ಆದ್ದರಿಂದ ವೆಂಕಟರಾಮಯ್ಯನವರ ಕಾಲಿಂಗ್ ಅಟೆನ್‌ಷನ್ ಮೊದಲು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ದಿನಾಂಕ ೫-೬-೮೮ ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆಯಿಂದ ಇಬ್ಬರ ಪರಿಸ್ಥಿತಿ ಅಪಾಯದಲ್ಲಿರುವ ಹಾಗೂ ಆಲ್ಲಿರುವ ಉದ್ರಿಕ್ತ ಪರಿಸ್ಥಿತಿಯ ಬಗ್ಗೆ ಪಂಚಾಯತ್ ಮಂತ್ರಿಗಳ ಗಮನ ಸೆಳೆಯುತ್ತೇನೆ.

(ಗೊಂದಲ)

---

xxx Not recorded as orderd by the Chair.

ಅಧ್ಯಕ್ಷರು.—ಚೀಫ್ ಮಿನಿಸ್ಟರು ಆಗ ಇರಲಿಲ್ಲ, ಆದ್ದರಿಂದ ಎರಡನೆಯ ಕಾಲಿಂಗ್ ಅಟೆನ್‌ಷನ್ ಕೇಳಲಿ ಎಂದು ಎಂ. ಶಿವಣ್ಣನವರನ್ನು ಕರೆದೆ ಅಷ್ಟರಲ್ಲಿ ಸ್ವಲ ಗಲಾಟೆಯಾಯಿತು. ಈಗ ಚೀಫ್ ಮಿನಿಸ್ಟರ್ ಬಂದಿದ್ದಾರೆ, ಅದಕ್ಕಾಗಿ ಮೊದಲನೇ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಶಿವಣ್ಣನವರನ್ನು ಕರೆದು, ಮತ್ತೆ ಇನ್ನೊಬ್ಬರನ್ನು ಕರೆಯುವುದು ಬೇಡ,

ಅಧ್ಯಕ್ಷರು.—ಆಯಿತು, ಶಿವಣ್ಣನವರ ಗಮನ ಸೆಳೆಯುವ ಸೂಚನೆಯನ್ನೇ ತೆಗೆದುಕೊಳ್ಳೋಣ.

ಶ್ರೀ ಆರ್. ರಾಮಯ್ಯ.—ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ನನ್ನ ಪ್ರಶ್ನೆಯನ್ನು ಮುಂದೂಡಿದೆ ಎಂದು ಹೇಳಬೇಕು. ಬೇಕಾದರೆ ಪ್ರಶ್ನೆಯನ್ನು ಮುಂದೂಡಿ, ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು.—ತಾವು ಕೂಡಿ, ನೆಕ್ಸ್ಟ್ ಟೈಮ್ ಉತ್ತರ ಕೊಡಿಸುತ್ತೇನೆ. Your suggestions are noted.

* * *

(ಗೊಂದಲ)

ಶ್ರೀ ಎಂ. ರಘುಪತಿ.—ನೀವು ಕೂಡ ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಪುನರಾಯ್ಕೆ ಆಗಿ ಬರಬೇಕೆಂದು ಹೇಳಿದರೆ ಹೇಗೆ? ಇದು ಸರಿ ಹೋಗುತ್ತದೆಯೇ?

(ಗೊಂದಲ)

ಅಧ್ಯಕ್ಷರು.—ತಾವು ಗಮನವನ್ನು ಸೆಳೆಯಿರಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅವರು ಹೇಳಿದ ಹಾಗೆ ಹೇಳಿದರೆ ಒಳ್ಳೆಯದೇ? ಏನು ಇದು?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಮೈನಾರಿಟಿ ಗೌರ್ನಮೆಂಟ್ ಆದರೆ ಯಾರಲ್ಲಿ ಗಮನವನ್ನು ಸೆಳೆಯುವುದಕ್ಕೆ ಆಗುತ್ತದೆ?

SRI M. RAGHUPATHI.—I am on a point of order. The remarks of the honble Member shall be expunged.

(ಗೊಂದಲ)

MR. SPEAKER.—I will expunge. Nothing will go on record

(ಗೊಂದಲ)

ಯಾರು ಏನು ವಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

MR SPEAKER.—Nothing will go record. Record
ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು.—ಪಾದೇಗೌಡರೇ ತಾವು ದಯವಿಟ್ಟು ಕೂಡಿ. ಆ ಕಡೆಯವರು ಏನಾದರೂ ಹೇಳಿದ್ದರೆ ಈ ಕಡೆಯವರು ಏನಾದರೂ ಹೇಳಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

** ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು.—ಮಾನ್ಯ ಶಿವಣ್ಣನವರೇ, ತಾವು ಮಂತ್ರಿಗಳ ಗಮನವನ್ನು ಸೆಳೆಯಿರಿ. ಆ ಕಡೆಯವರೇನಾದರೂ ಅಂದಿದ್ದರೆ ಮತ್ತು ಈ ಕಡೆಯವರೇನಾದರೂ ಅಂದಿದ್ದರೆ ಅದನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ಎನ್. ನಾಯಕ್.—ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಶಿವಣ್ಣನವರೇ, ತಾವು ಗಮನವನ್ನು ಸೆಳೆಯಿರಿ. ನಾನು ಐದು ಮಂದಿಗೂ ಅವಕಾಶ ಕೊಡುತ್ತೇನೆ. ನೇರವಾಗಿ ತಾವು ಸರ್ಕಾರದ ಗಮನವನ್ನು ಸೆಳೆಯಿರಿ. ನಾಯಕರೇ ತಾವು ಕೂಡ್ರಿ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೇ, ನನ್ನದು ಕ್ರಿಯಾಲೋಪ ಇದೆ,

ಅಧ್ಯಕ್ಷರು.—ಈಗ ಕ್ರಿಯಾಲೋಪ ಬರುವುದಿಲ್ಲ. ಮಾನ್ಯ ಶಿವಣ್ಣನವರೇ ತಾವು ಗಮನವನ್ನು ಸೆಳೆಯಿರಿ. ಇನ್ನು ಗಮನವನ್ನೇ ಸೆಳೆದಿಲ್ಲ. ಗಮನವನ್ನು ಸೆಳೆಯಲಿ. ಆಮೇಲೆ ಕ್ರಿಯಾಲೋಪದ ಬಗ್ಗೆ ನೋಡೋಣ.

ಶ್ರೀ ಆರ್.ಎನ್. ನಾಯಕ್.—ಆಮೇಲೆ ಬರುವುದಿಲ್ಲ. ಅದು ಈಗಲೇ ಬರಬೇಕಾಗುತ್ತದೆ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಮೊದಲು ನಾನು ಶಿವಣ್ಣನವರನ್ನು ಕರೆದೆ. ಶಿವಣ್ಣನವರನ್ನು ಕರೆದಾಗ ಮಿನಿಸ್ಟರ್ ಇರಲಿಲ್ಲ. ಮಿನಿಸ್ಟರ್ ಬರಲಿ ಎಂದು ಹೇಳಿ ಎರಡನೇ ವಿಷಯದ ಬಗ್ಗೆ ಗಮನವನ್ನು ಸೆಳೆಯಲಿಕ್ಕೆ ವೆಂಕಟರಾವಮ್ಯೆವರಿಗೆ ಹೇಳಿದೆ. ಶಿವಣ್ಣನವರೂ ಇದ್ದಾರೆ. ಮಂತ್ರಿಗಳು ಇದ್ದಾರೆ. ಈಗ ವೆಂಕಟರಾಪ್ಪಯ್ಯನವರು ಬೇಡ ಮೊದಲು ಶಿವಣ್ಣನವರನ್ನೇ ಕರೆಯಿರಿ ಎಂದು ಕೇಳಿದ್ದಕ್ಕೆ ನಾನು ಆಲ್‌ರೈಟ್' ಎಂದು ಹೇಳಿದೆ. ಶಿವಣ್ಣನವರು ಮೊದಲು ಸರ್ಕಾರದ ಗಮನವನ್ನು ಸೆಳೆಯಲಿ, ಅದಕ್ಕೆ ಉತ್ತರ ಕೊಟ್ಟಾದ ಮೇಲೆ ಪಾಯಿಂಟ್ ಆಫ್ ಆರ್ಡರ್ ಇದ್ದರ ನೋಡೋಣ. ನಾನು ನಾಲ್ಕು ಮಂದಿಗೂ ಅವಕಾಶ ಕೊಡುತ್ತೇನೆ. ಶಿವಣ್ಣನವರೇ, ತಾವು ದಯಮಾಡಿ ಸರ್ಕಾರದ ಗಮನವನ್ನು ಸೆಳೆಯಿರಿ.

(ಗೊಂದಲ)

ಗಮನ ಸೆಳೆಯುವ ಸೂಚನೆಗಳು

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ ಈಗ ಬಹುಮತ ಕಳೆದುಕೊಂಡಿರತಕ್ಕಂಥ ಸರ್ಕಾರವಿದೆ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ. ದಯಮಾಡಿ ಉತ್ತರ ಕೊಡಲಿ.

(ಗೊಂದಲ)

* * *

ಅಧ್ಯಕ್ಷರು.—ನೀವು ಗಮನ ಸೆಳೆಯರಿ.

ಶ್ರೀ ಎಂ. ಶಿವಣ್ಣ.—ಬಹುಮತ ಕಳೆದುಕೊಂಡಿರತಕ್ಕಂಥ ಸರ್ಕಾರದ ವಿಚಾರದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಖಿರ್ಗೆಯವರೇ, ತಾವು ಸ್ವಲ್ಪ ಹೇಳಿ.

(ಗೊಂದಲ)

ಅಧ್ಯಕ್ಷರು.—ಮಂತ್ರಿಗಳು ಉತ್ತರ ಹೇಳಬೇಕು;

(* * * Expunged as orderd by the speaker.)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ,

ಶ್ರೀ ರಾಮಕೃಷ್ಣಹೆಗಡೆ.—ಮಾನ್ಯ ಅಧ್ಯಕ್ಷರೇ, ಅವರು ಕಳಂಹಿಸಿರತಕ್ಕಂಥ ಗಮನ ಸೆಳೆಯುವ ಸೂಚನೆ ಏನಿದೆ ಅದನ್ನು ನಾನು [illegible] ಪಾಟೀಲ್ ಎಸ್. ಪುಟ್ಟಸ್ವಾಮಿ ಎಂ. ಶಿವಣ್ಣ [illegible] ಉಸ್ತಾದ್, ಮಿತ್ತು ವೀರಕಂಪಾರ ಪಾಟೀಲರವರ ಗಮನಸೆಳೆಯುವ ಸೂಚನೆ ಏನೆಂದರೆ, ರಾಜ್ಯದ ಅಗ್ಗದಬಟ್ಟಿ, ತಮ್ಮುಗಾರಕರು ಹಾಗೂ ಕಾರ್ಮಿಕರಿಗೆ ಮಾರುಕಟ್ಟೆ ತೊಂದರೆಯಾಗಿ ಆರ್ಥಿಕ ಹಿನ್ನಡೆಯಾಗಿದೆ ಎಂಬ ಬಗ್ಗೆ ಮಾನ್ಯ ಬೃಹತ್ ಮತ್ತು ಕೈಗಾರಿಕಾ ಮಂತ್ರಿಗಳ ಗಮನಸೆಳೆಯಲಾಗಿದೆ. ನಾನೇನು ಕೈಗಾರಿಕಾ ಮಂತ್ರಿಯೇ? ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಂತ್ರಿಗಳು ಇದ್ದಾರೆ. ಅವರು ಉತ್ತರ ಕೊಡಲಿ.

ಅಧ್ಯಕ್ಷರು.—ಆಯಿತು. ಶಿವಣ್ಣನವರೇ, ನಿಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ನೀವು ಮೊದಲು ಮಂತ್ರಿಗಳ ಉತ್ತರ ಕೇಳಿಸಿಕೊಳ್ಳಿ.

* *

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ,

12-00 ಮಧ್ಯಾಹ್ನ

ಅಧ್ಯಕ್ಷರು.—ಮಾನ್ಯ ಮಲ್ಲಾರಿಗೌಡ ಪಾಟೀಲರು, ಪುಟ್ಟಸ್ವಾಮಿಯವರು, ಎಂ. ಶಿವಣ್ಣನವರು, ಎಂ. ಎಲ್. ಉಸ್ತಾದ್‌ರವರು ಮತ್ತು ಮಿತ್ತುವೀರಕಂಪಾರ ಪಾಟೀಲರು ಮಾತ್ರ ಈ ಗಮನ ಸೆಳೆಯುವ ಸೂಚನೆಯಿಂದನ್ನು ಕಳುಹಿಸಿರುವುದು. ಮಲ್ಲಾರಿಗೌಡ ಪಾಟೀಲರು ಅಬ್ಸೆಂಟ್, ಎಸ್. ಪುಟ್ಟಸ್ವಾಮಿಯವರು ಅಬ್ಸೆಂಟ್ ಆಗಿದ್ದಾರೆ. ಶಿವಣ್ಣನವರೇ ನೀವು ಬರೀ ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ನಾನು ಮೊದಲು ಹೇಳಿದ ವಿಚಾರವನ್ನೇ ಹೇಳಬೇಕಾಗುತ್ತದೆ. * * ಎಂದರೆ ನಾವು ಯಾವ ಕಾನ್ಫಿಡೆನ್ಸ್ ಇಟ್ಟುಕೊಂಡು ಕ್ಲಾರಿಫಿಕೇಷನ್ ಕೇಳೋಣ?

(ಗೊಂದಲ)

ಅಧ್ಯಕ್ಷರು.—ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಶಿವಣ್ಣ.—ಇದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ಇವತ್ತು ಸರ್ಕಾರದಲ್ಲಿ ಬಹುಮತ ಇಲ್ಲ.

(ಗೊಂದಲ)

ಶ್ರೀ ಎಂ. ಶಿವಣ್ಣ.—ನಾನು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದೇನೆಂದರೆ, ಸಾರ್ವಜನಿಕ ಮಹತ್ವದ ವಿಚಾರವಾದ, * * * ನಾನು ಹೇಳುತ್ತಿದ್ದೇನೆ. ಅವರು ಇದಕ್ಕೆ ಏನು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು.—ನೀವು ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಎಂ. ಶಿವಣ್ಣ.—* * ಯಾವ ಕಾನ್ಫಿಡೆನ್ಸ್ ಇಟ್ಟುಕೊಂಡು ನಾವು ವಿಚಾರವನ್ನು ಪ್ರಸ್ತಾವ ಮಾಡಬೇಕು?

(ಗೊಂದಲ)

ಅಧ್ಯಕ್ಷರು.—ಕ್ಲಾರಿಫಿಕ್ಷೇಷನ್ ಬಿಟ್ಟು ಬೇರೆ ಏನೂ ಕೇಳಬಾರದು. ಸರ್ಕಾರದಲ್ಲಿ ಬಹುಮತ ಇಲ್ಲ ಎಂದು ಹೇಳಿರುವ ಮಾತನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ.

---

* (ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.– ಅವರು ಹೇಳಿರುವುದರಲ್ಲಿ ಆನ್‌ಪಾರ್ಲಿಮೆಂಟರಿ ವರ್ಡ್ ಏನು ಇದೆ? ಯಾವುದಕ್ಕೂ ನೀವು ಎಕ್ಸ್‌ಪಂಡ್ ಮಾಡುತ್ತೇನೆ ಎಕ್ಸ್‌ಪಂಜ್, ಮಾಡುತ್ತೇನೆ ಎಂದರೆ ಏನು ಅರ್ಥ?

ಅಧ್ಯಕ್ಷರು.—ಸರ್ಕಾದಲ್ಲಿ ಬಹುಮತ ಇಲ್ಲ ಎಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಹೌದು. ಅದನ್ನು ನೂರು ಸಲ ಹೇಳುತ್ತೇವೆ.

ಅಧ್ಯಕ್ಷರು.—ಅದನ್ನು ಏಕೆ ಹೇಳಬೇಕು? ತಾವು ವಿಷಯಕ್ಕೆ ಬನ್ನಿ ಎಂದು ತಾವು ಅವರಿಗೆ ಹೇಳಿ?

(ಗೊಂದಲ)

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, * * * ಸರ್ಕಾರದ ಕಡೆ ೧೫೯ ಜನರಲ್ಲಿ ಬಹಳಷ್ಟು ಜನ ಸದಸ್ಯರು ಭಿನ್ನಮತೀಯರಾಗಿದ್ದಾರೆ. ಸರ್ಕಾರ ಇಲ್ಲ ಎನ್ನುತಕ್ಕ ಪರಿಸ್ಥಿತಿ ಇವತ್ತು ನಿರ್ಮಾಣ ಆಗಿದೆ. ನಾವು ಯಾವ ಕಾನ್ಫಿಡೆನ್ಸ್ ಇಟ್ಟುಕೊಂಡು ಪ್ರಶ್ನೆಯನ್ನು ಕೇಳಬೇಕು?

ಅಧ್ಯಕ್ಷರು.—ಅದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಇಲ್ಲಿ ಸ್ವಲ್ಪ ಕೇಳಿ. ಮುಖ್ಯ ಮಂತ್ರಿಯವರು ಏನೋ ಹೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ. ಮಾನ್ಯ ಶಿವಣ್ಣನವರು ಗಮನ ಸೆಳೆಯುವ ಸೂಚನೆ ವಿಚಾರದಲ್ಲಿ ಏನಾದರು ಕ್ಲಾರಿಫಿಕೇಷನ್ ಮತ್ತು ಸ್ಪಷ್ಟೀಕರಣ ಕೇಳುವುದಿದ್ದರೆ ಕೇಳಲಿ. ಈ ವಿಷಯದಲ್ಲಿ ಒಂದು ಗಂಟೆಗಿಂತ ಹೆಚ್ಚು ಈ ಮನೆಯ ಸಮಯ ವ್ಯರ್ಥವಾಗುತ್ತಿದೆ. ಸರ್ಕಾರ ಇಲ್ಲ ಎಂದರೆ ಹೇಗೆ?

(ಗೊಂದಲ)

* * *

ಅಧ್ಯಕ್ಷರು.—ನಥಿಂಗ್ ವಿಲ್ ಗೋ ಆನ್ ರೆಕಾರ್ಡ್ ನಥಿಂಗ್ ವಿಲ್ ಗೋ ಆನ್ ರೆಕಾರ್ಡ್.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಮುಖ್ಯ ಮಂತ್ರಿಯವರ ಪೊಂಡು ವಾದಕ್ಕೆ ಏನು ಹೇಳುವುದು?

(ಗೊಂದಲ)

ಅಧ್ಯಕ್ಷರು.—ಈಗ ಯಾರೂ ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ...—

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಮುಖ್ಯಮಂತ್ರಿಗಳ ಪೊಂಡು ವಾದಕ್ಕೆ ನಮ್ಮ ವಿರೋಧವಿದೆ, ಧಿಕ್ಕಾರವಿದೆ.....

(ಗೊಂದಲ)

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ಹೀಗೆ ಮಾನ್ಯ ಸದಸ್ಯರುಗಳು..... ತಾವೂ ಕೂಡ ಇಲ್ಲಿ ೬ ವರ್ಷಗಳ ಕಾಲ ನನ್ನ ಜಾಗದಲ್ಲಿ ಕುಳಿತು ಸಭೆ ನಡೆಸಿದ್ದೀರಿ.....

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಪಾರ್ಲಿಮೆಂಟರಿ ಸಚಿವರು ಮಾತನಾಡುವಾಗ ಸ್ವಲ್ಪ ಹಿಡಿತ ಇರಬೇಕು.....

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೆ ಧೈರ್ಯ ಇದ್ದರೆ ... ಇಲ್ಲದಿದ್ದರೆ ಮತ್ತೆ ಸುಮ್ಮನೆ ಏಕೆ ಮಾತನಾಡುತ್ತೀರಿ ?.....ನಿಮ್ಮ ವಿಚಾರವನ್ನೂ ನಾವೆಲ್ಲರೂ ನೋಡಿದ್ದೇವೆ.....

(ಗೊಂದಲ)

---

* ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಒಬ್ಬೊಬ್ಬರಿಗೆ ಒಬ್ಬೊಬ್ಬರು ಅಹ್ವಾನ ಕೊಡುವುದು ಬೇಡ. ಈಗ ಪದನ ನಡೆಸೋಣ. ಈಗ ಗವಂನ ಸೆಳೆಯುವ ಸೂಚನೆ ತೆಗೆದುಕೊಂಡಿದ್ದೇನೆ. ಈ ಬಗ್ಗೆ ಅವರು ಏನು ಹೇಳುತ್ತಾರೆ ಅದನ್ನು ಕೇಳಿ...

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಮ್ಮ ಪಕ್ಷ ಇದು ನಿನ್ನೆಯಂ ಪಕ್ಷವಲ್ಲ. ಇದೊಂದು ದೇಶದ ದೀರ್ಘಕಾಲದ ಪಕ್ಷ, ನಿಮ್ಮ ಹಾಗೆ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಈಗ ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು ನಾನು ಶಿವಣ್ಣನವರಿಗೆ ಮಾತನಾಡಲು ಹೇಳಿದ್ದೇನೆ. ಅವರು ಮಾತನಾಡಿದ ಮೇಲೆ ಉಳಿದವರು ಕ್ಲಾರಿಫಿಕೇಶನ್ ಬೇಕಾದರೆ ಕೇಳಿ, ಬೇಡ ಅಂದರೆ ಮುಂದಿನ ಕಲಾಪಕ್ಕೆ ಹೋಗೋಣ...

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಾರಂಭ ಮಾಡಿದವರು ನೀವು, ನಾವಲ್ಲ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಿಮಗೆ ಧೈರ್ಯ ಇಲ್ಲ...

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮಗೂ ಕೂಡ ಹಿಂದೆ ಇದ್ದ ಧೈರ್ಯ ಈಪೊತ್ತು ಇಲ್ಲ.....

(ಗೊಂದಲ)

ಅಧ್ಯಕ್ಷರು.—ಈಗ ಯಾರೂ ಮಾತನಾಡಿದರೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ.

SRI M. VEERAPPA MOILY.—If the Hon. Chief Minister has got political guts, let him sack the dissidents.

MR. SPEAKER.—Nothing will be recorded. xxx

(INTERRUPTION)

SRI R.V. DESHPANDE.—Your candidate has come in second round. ನಾಚಿಕೆ ಬರಬೇಕು.

ಅಧ್ಯಕ್ಷರು.—ಇದನ್ನು ಸಾಕು ಮಾಡೋಣವೇ. ಕಾಲಿಂಗ್ ಅಟೆನ್‌ಷನ್ ತಗೊಳ್ಳೋಣವೇ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಒಬ್ಬರೇ ಒಬ್ಬ ಎಂಎಲ್‌ಎ ವಿರೋಧಿಸಿದರೂ ನಾನು ಮುಖ್ಯಮಂತ್ರಿಯಾಗಿರುವುದಿಲ್ಲ ಎಂದ ಹೆಗಡೆಯವರು ಇಂದು ೫೨ ಜನ ಎಂಎಲ್‌ಎಗಳು ಇವರನ್ನು ವಿರೋಧಿಸಿದರೂ ಜಾಗ ಬಿಟ್ಟು ಕದಲುತ್ತಿಲ್ಲ. ಇದಕ್ಕೇನೆನ್ನುತ್ತಾರೆ. It is un-precented in the history.....

ಶ್ರೀ ಪಿ. ಜಿ. ಆರ್. ಸಿಂಧ್ಯ.— ಸರ್ಕಾರವನ್ನು ಬೀಳಿಸುವುದಿಲ್ಲವೆಂದು ಭಿನ್ನಮತೀಯರು ಹೇಳಿದ್ದಾರೆ. ನಿಮ್ಮ ಮನೆಯನ್ನು ಮೊದಲು ಸರಿ ಮಾಡಿಕೊಳ್ಳಿ. ಅಲಹಾಬಾದ್‌ನಲ್ಲಿ ಜನ ನಿಮಗೆ ಸರಿಯಾಗಿ ಬುದ್ಧಿ ಕಲಿಸುತ್ತಾರೆ.

(x Not recorded as orderd by the chair)

ಶ್ರೀ ಆರ್.ಎನ್. ನಾಯಕ್.—ಬ್ರಿಗೇಡ್ ರಸ್ತೆ ಸುತ್ತಿಕೊಂಡು ಬರಲು ನಿಮ್ಮ ಪಾರ್ಟಿಯ ಬಸ್ ಇಟ್ಟಿದ್ದೀರಂತೆ, ಹೌದೆ ?

(ಗೊಂದಲ)

ಶ್ರೀ ಕೆ. ವಸಂತ ಬಂಗೇರಾ,—ಇದೇನು ಕೋಳಿ ಅಂಕ ಕೆಟ್ಟು ಹೋಯಿತೇನು ? ಶಿಸ್ತು ಕಾರ್ಯಕಲಾಪ ಏನೂ ಇಲ್ಲವೇ ?

ಅಧ್ಯಕ್ಷರು.—ಶಿವಣ್ಣನವರೇ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಶಿವಣ್ಣ.—ಒಂದು ಸರ್ಕಾರಕ್ಕೆ ಬಹುಮತವೇ ಇಲ್ಲವೆಂದ ಮೇಲೆ ಅದರ ಉತ್ತರವನ್ನು ನಾನು ಹೇಗೆ ನಂಬುವುದು ?

(ಗೊಂದಲ)

ಅಧ್ಯಕ್ಷರು.—ಈಗ ಮುಂದಿನ ಕಾಲ್ ಅಟೆನ್‌ಷನ್.

ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆಯಿಂದ ಉಂಟಾದ ಉದ್ರಿಕ್ತಪರಿಸ್ಥಿತಿಯ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ದಿನಾಂಕ ೫-೬-೧೯೮೮ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆಯಿಂದ ಇಬ್ಬರ ಪರಿಸ್ಥಿತಿ ಅಪಾಯದಲ್ಲಿರುವ ಹಾಗೂ ಆಸ್ಪತ್ರೆಯಲ್ಲಿರುವ ಉದ್ರಿಕ್ತ ಪರಿಸ್ಥಿಯ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸರ್ಕಾರದ ಹೇಳಿಕೆ ಕೆಳಗಿನಂತಿದೆ.

ದಿನಾಂಕ ೫-೬-೧೯೮೮ರಂದು ಸಾಯಂಕಾಲ ೪-೩೦ ಸುಮಾರಿಗೆ ೧೦ ವರ್ಷದ ನಾಗರಾಜನು ತನ್ನ ತಾಯಿಯೊಂದಿಗೆ ಶಿಡ್ಲಘಟ್ಟದ ಉಲ್ಲೂರುಪೇಟೆಯಲ್ಲಿ ಹೋಗುತ್ತಿದ್ದಾಗ ಕೆಲವು ಅಪರಿಚಿತರಲ್ಲಿ ಎಸೆದ ಸ್ಫೋಟಕವು ಆ ಹುಡುಗನ ಬಲ ಕಾಲಿಗೆ ಬಡಿದು ಗಾಯವಾಯಿತು. ತಕ್ಷಣ ಶಿಡ್ಲಘಟ್ಟದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಆತನು ಅಪಾಯದಿಂದ ಪಾರಾಗಿರುವನೆಂದು ವರದಿಯಾಗಿದೆ. ಆತನ ತಂದೆ ವೆಂಕಟರಾಯಪ್ಪನ ದೂರಿನ ಮೇರೆಗೆ ಶಿಡ್ಲಘಟ್ಟ ಪೋಲೀಸ್ ಠಾಣೆಯಲ್ಲಿ ಕೇಸ್ ನಂ. ೩೧೦:೮೮ನ್ನು ಸ್ಫೋಟಕ ಕಾಯಿದೆಯ ೩,೪,೫ ಮತ್ತು ಐಪಿಸಿಯ ೩೫೭ರ ಸೆಕ್ಷನ್‌ನೊಂದಿಗೆ ದಾಖಲಿಸಲಾಯಿತು.

ಈ ಘಟನೆಯ ನಂತರ ದೇಶದಪೇಟೆ ಮತ್ತು ಪಂಯೂರ ಚಿತ್ರ ಮಂದಿರದ ಬಳಿ ಕೆಲವು ಗಲಭೆಗಳು ಜರುಗಿದವು. ಉಲ್ಲೂರು ಪೇಟೆಯಲ್ಲಿ ಒಬ್ಬ ಯುವಕನು ತಿವಿತದಿಂದಾಗಿ ಮೃತಪಟ್ಟಿರುತ್ತಾನೆ. ಆತನ ದೇಹವನ್ನು ಆಸ್ಪತ್ರೆಗೆ ಒಯ್ಯಲಾಗಿದೆ. ಆತನನ್ನು ಆಂಧ್ರಪ್ರದೇಶದ ಹಿಂದೂಪುರ ವಾಸಿ, ೨೨ ವರ್ಷದ ಅನ್ವರ್ ಎಂದು ಗುರುತಿಸಲಾಗಿದೆ. ಆತನು ಕಳೆದ ೧ ವರ್ಷದಿಂದ ಶಿಡ್ಲಘಟ್ಟದ ಹಳೇ ಆಂಜೆ ಕಛೇರಿ ರಸ್ತೆಯಲ್ಲಿ ವಾಸ ಮಾಡುತ್ತಿದ್ದನು. ಆತನಿಗೆ ಶಿಡ್ಲಘಟ್ಟದಲ್ಲಿ ಒಂದು ಸಿಲ್ಕ್ ಫಿಲೇಚರ್ ಇರುತ್ತದೆ. ಆತನ ದೇಹವನ್ನು ಆತನ ಸಹೋದರ ಸಲೀಂ ಮತ್ತು ಸಿರಾಜ್, ಮುನ್ಸಿಪಲ್ ಕೌನ್ಸಿಲರ್, ಶಿಡ್ಲಘಟ್ಟ ಇವರಿಂದ ಗುರುತಿಸಲ್ಪಟ್ಟಿತು. ಈ ಘಟನೆಯಲ್ಲಿ ಗಾಯಗೊಂಡ ಎರಡೂ ಕೋಮಿಗೆ ಸೇರಿದ ೭ ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಟ್ಟರು. ಈ ೭ ಮಂದಿಯೂ ಅಪಾಯದಿಂದ ಪಾರಾಗಿರುತ್ತಾರೆ

ಈ ಘಟನೆಯಲ್ಲಿ ಎರಡೂ ಗುಂಪಿಗೆ ಸೇರಿದ ಒಟ್ಟು ೧೯ ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಘಟನೆ ನಡೆದ ತಕ್ಷಣ ಪೋಲೀಸರು ಗಲಭೆಯನ್ನು ಸ್ವಲ್ಪ ಸಮಯದಲ್ಲೇ ಹತೋಟಿಗೆ ತಂದರು. ಶಿಡ್ಲಘಟ್ಟದಲ್ಲಿ ಸಾಯಂಕಾಲ ೬ ಗಂಟೆಯಿಂದ ಮರುದಿನ ೬ ಗಂಟೆಯ ವರೆಗೆ ಕರ್ಫ್ಯೂವನ್ನು ವಿಧಿಸಲಾಗಿತ್ತು. ಈ ಸಂಬಂಧದಲ್ಲಿ ಸೆಕ್ಷನ್ ೧೪೪ ೧೪೭ ೧೪೮ ೩೨೪ ೩೩೨ ಐಪಿಸಿ ಯನ್ವಯ ಕ್ರೈಂ ನಂ. ೩೧೦:೮೮ನ್ನು ಸಬ್ ಇನ್ಸ್‌ಪೆಕ್ಟರ್‌ರವರ ದೂರಿನನ್ವಯ ಒಂದು ದೊಂಬಿ ಪ್ರಕರಣ ನೋಂದಾಯಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ. ಗಬ್ಬೆ, ದೊಂಬಿ ಮತ್ತು ಹಾನಿಗೆ ಸಂಬಂಧಿಸಿದಂತೆ ಎರಡೂ ಕೋಮಿನವರ ವಿರುದ್ಧ ಇನ್ನೂ ೮ ಕೇಸುಗಳನ್ನು ದಾಖಲು ಮಾಡಲಾಗಿದೆ. ಈ ಕೇಸುಗಳು ತನಿಖೆಯಲ್ಲಿವೆ.

ಕೇಂದ್ರ ವಲಯದ ಡಿಐಜಿಪಿ, ಸಾಕಷ್ಟು ಸಿಬ್ಬಂದಿಯೊಂದಿಗೆ ೪ ಪೋಲೀಸ್ ಇನ್ಸ್‌ಪೆಕ್ಟರ್, ೯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ೫ ಪ್ಲಟೂನ್ ಕೆಎಸ್ಆರ್‌ಪಿ ಮತ್ತು ೪ ಪ್ಲಟೂನ್ ಡಿಎಆರ್